ಆದರೆ ಇವರಿಗೆ ಅದೆಲ್ಲ ಅರ್ಥ ಆಗೋದೇ ಇಲ್ಲ. ಯಾರೋ ಕರೆದರು ಅಂತ ಅಲ್ಲಿ ಇಲ್ಲಿ ಹೋಗಿ ಅದು ಇದು ಎಂದು ಬೇಕಾದ್ದು ಬೇಡವಾದದ್ದೆಲ್ಲ ಇವರು ಭಾಷಣ ಮಾಡಿರ್ತಾರೆ. ನಾನು ಎಷ್ಟೋ ಸಲ ಇವರಿಗೆ ಇದು ಬೇಡ ಎಂದು ಹೇಳಿದ್ದಿದೆ. ರಾಂಪುರದಲ್ಲಿ ಇವರು ಇದ್ದ ಹಾಗೆ ಈ ಊರಲ್ಲೂ ಯಾಕೆ ಇವರಿಗೆ ಇರಲಿಕ್ಕೆ ಆಗೋದಿಲ್ಲ? ಅಲ್ಲಿ ಒಬ್ಬರಿಗೊಬ್ಬರು ಸ್ಪಂದಿಸುವುದಿಲ್ಲ. ಆದರೆ ಇಲ್ಲಿ ಒಂದು ಸಾಸಿವೆ ಬಿದ್ದರೆ ಸಾಕು ಸುದ್ದಿಯಾಗುತ್ತದೆ ಎನ್ನುವುದು ಇವರಿಗಿನ್ನೂ ಗೊತ್ತಾಗಿಲ್ಲ' ಎಂದರು.

'ಏನಾಯ್ತು?' ಎಂದು ಶೆಟ್ಟರು ಮತ್ತೆ ಪ್ರಶ್ನಿಸಿದರು.

ರಾಯರು 'ಮೊದಲು ಒಂದು ಕಪ್ ಟೀ ಮಾಡಿಕೊಡು ಮಾರಾಯ್ತಿ. ನೀನು ಏನನ್ನೋ ಹೇಳಲಿಕ್ಕೆ ಹೋಗಿ ಮತ್ತಿನ್ನೇನೋ ಹೇಳುತ್ತಿ' ಎಂದು ಹೆಂಡತಿಗೆ ಹೇಳಿ, 'ಇವಳು ಭಾರೀ ಗಾಬರಿ ಆಗಿದ್ದಾಳೆ ಶೆಟ್ಟರೇ. ಊರೇ ಬಿಟ್ಟು ಹೋಗೋಣ ಎಂದು ರಾತ್ರೆ ಇವಳು ಹೇಳಿದ್ದು ಕೇಳಿ, 'ಅರೇ ಅಷ್ಟು ಹೆದರುವುದು ಯಾಕೆ? ಈ ದೇಶದಲ್ಲಿ ಕಾನೂನು ವ್ಯವಸ್ಥೆ ಎಲ್ಲವೂ ಚೆನ್ನಾಗಿದೆ. ಬೇಕಾದರೆ ನಮಗೆ ಎಲ್ಲಾ ಭದ್ರತೆಯನ್ನು ಸರಕಾರ ಕೊಡುತ್ತದೆ ಅಂದರೆ, ಇವಳಿಗೆ ಅದು ಅರ್ಥವೇ ಆಗುವುದಿಲ್ಲ' ಎಂದು ಶೆಟ್ಟರನ್ನು ಉದ್ದೇಶಿಸಿ ಹೇಳಿದವರೇ – 'ಸರೋಜ, ಅವಸರದಲ್ಲಿ ನೀನು ಚಾ ಮಾಡಿ ನಾವು ಕುಡಿಯದ ಹಾಗೆ ಮಾಡಬೇಡ!' ಎಂದು ಹೆಂಡತಿಗೆ ಕೂಗಿ ಹೇಳಿದರು. ಆಮೇಲೆ 'ದಿನಾ ಬೆಳಗ್ಗಿನ 'ಚಾ' ನಾನೇ ಮಾಡುವುದು ಶೆಟ್ಟರೇ. ಇವತ್ತು ಏಳುವಾಗ ತಡವಾಯ್ತು. ಮಲಗುವಾಗ ತಡರಾತ್ರೆಯಾಗಿ ನಿದ್ದೆಯೂ ಬರಲಿಲ್ಲ' ಎಂದರು.

ಅಡುಗೆ ಮನೆಯಲ್ಲಿ 'ಚಾ'ದ ತಯಾರಿಯಲ್ಲಿದ್ದ ಸರೋಜಮ್ಮ 'ಇವರದ್ದೊಂದು ಸ್ಪೆಶಲ್ ವಿಚಾರ! ಇವರ ಎಂಥೆಂಥ ದೋಸ್ತಿಗಳಿಗೆ ನಾನು ಮಾಡಿಕೊಟ್ಟ 'ಚಾ' ಖುಶಿ ಆಗುತ್ತದೆಯಾದರೆ, ಇವರಿಗೆ ಮಾತ್ರ ಯಾಕೆ ಆಗುವುದಿಲ್ಲ?' ಎಂದು ಗುಣುಗುಣಿಸಿದ್ದು ಚಾವಡಿಗೂ ಕೇಳಿಸಿತು.


ಶೆಟ್ಟರಿಗೆ ಈ ಗಂಡ ಹೆಂಡಿರ ಒಣಜಗಳ ಇಷ್ಟವಾಗಲಿಲ್ಲ. 'ಬಿಡಿ ಅಕ್ಕ' ಎಂದು ಅವರು ಸರೋಜಮ್ಮನಿಗೆ ಕಿವಿಮಾತು ಹೇಳಿದರು.

ರಾಯರು 'ಈವೊತ್ತು ವಾಕಿಂಗ್‌ಗೆ ಹೋಗ ಬೇಕೋ ಬೇಡವೋ ಅಂತ ಯೋಚಿಸುತ್ತಿದ್ದೇನೆ ಶೆಟ್ರೇ. ಯಾಕೋ ನಾನು ಫ್ರೆಶ್ ಮೂಡಿನಲ್ಲಿ ಇಲ್ಲ. ನಾನು ಫ್ರೆಶ್ ಮೂಡಿನಲ್ಲಿ ಇದ್ದರೆ ಮಾತ್ರ ವಾಕಿಂಗ್‌ಗೆ ಹೋಗುವುದು. ಇಲ್ಲವಾದರೆ ಅದು ಕಾಟಾಚಾರದ ವಾಕಿಂಗ್ ಆಗಿಬಿಡುತ್ತದೆ. ಮೂಡ್ ಇಲ್ಲದ ವಾಕಿಂಗ್‌ನಿಂದ ಯಾವ ಪರಿಣಾಮವೂ ದೇಹದ ಮೇಲೆ ಆಗುವುದಿಲ್ಲ ಎನ್ನುತ್ತಾರೆ ಡಾ. ಬಿ.ಎಂ. ಹೆಗ್ಡೆ! ನನಗೂ ಹಾಗನಿಸುತ್ತದೆ' ಎಂದರು.

ಶೆಟ್ಟರು 'ಇರಬಹುದು ರಾಯರೇ. ಚಾ ಕುಡಿದ ತಕ್ಷಣ ನೀವು ಫ್ರೆಶ್ ಆಗುತ್ತೀರಿ. ಈಗ ನಿನ್ನೆ ನಡೆದದ್ದು ಏನು ಎಂದು ಹೇಳಿ?' ಎಂಬ ಕುತೂಹಲ ತೋರಿಸಿದರು.

ರಾಯರು 'ವಿಷಯ ಸಿಲ್ಲಿ ಅಂದರೆ ಸಿಲ್ಲಿ ಶೆಟ್ಟರೇ. ಸೀರಿಯಸ್ ಅಂದರೆ ಸೀರಿಯಸ್. ಅದು ನಾವು

## ಕಳೆದ ಸಂಚಿಕೆಯಲ್ಲಿ



ಸತೀಶ ಕುಲಕರ್ಣಿ ಮತ್ತು ಜಯಂತಿ ಅವರೊಂದಿಗಿನ ಶ್ರೀನಿವಾಸರಾಯರ ಒಡನಾಟ ಸ್ನೇಹದ ಚೌಕಟ್ಟನ್ನು ದಾಟಿತು. ಇಬ್ಬರ ಮದುವೆಯಲ್ಲಿ ರಾಯರು ಬಂಧುವಿನ ಗತ್ತಿನಲ್ಲೇ ಓಡಾಡಿದರು. ಆ ಸಲುಗೆಯಲ್ಲೇ ತಮ್ಮ ಪ್ರಭಾವವನ್ನು ಉಪಯೋಗಿಸಿ ತಾವು ಕೆಲಸ ಮಾಡುತ್ತಿದ್ದ ಕಾಲೇಜಿನಲ್ಲೇ ಜಯಂತಿ ಅವರಿಗೆ ಉದ್ಯೋಗ ದೊರಕಿಸಿಕೊಡಲು ಮುಂದಾದರು. ಕಾಲೇಜ್ ಟ್ರಸ್ಟ್‌ನ ಅಧ್ಯಕ್ಷರಿಗೆ ರಾಯರ ಬಗ್ಗೆ, ಅವರ ವಿದ್ವತ್ತಿನ ಬಗ್ಗೆ ಅಪಾರ ಗೌರವ. ಆ ಅಭಿಮಾನದ ಕಾರಣದಿಂದಾಗಿ ಅವರು ಶಿಫಾರಸು ಮಾಡಿದ ಜಯಂತಿ ಅವರಿಗೆ ನೌಕರಿ ಕೊಡಲು ಒಪ್ಪಿಕೊಂಡರು. ಕೆಲಸವೇನೋ ದೊರೆಯಿತು. ಆದರೆ, ಸತೀಶ–ಜಯಂತಿ ಅವರೊಂದಿಗಿನ ಸಲುಗೆ ರಾಯರ ಪತ್ನಿ ಅವರ ಸಿಡಿಮಿಡಿಗೆ ಕಾರಣವಾಯಿತು.

ನೋಡುವ ದೃಷ್ಟಿಕೋನವನ್ನು ಹೊಂದಿಕೊಂಡ ಹಾಗೆ!' ಎನ್ನುತ್ತಾ ಆದದ್ದು ಇಷ್ಟು ಎಂದು ಕಳೆದ ರಾತ್ರೆಯ ಘಟನೆಯನ್ನು ವಿವರಿಸಿದರು. ಶೆಟ್ಟರು ಬೆರಗಾಗಿ 'ಛೆ! ಇದು ದೊಡ್ಡಕತೆಯಾಯಿತಲ್ಲ!' ಎನ್ನುತ್ತಿದ್ದಂತೆ ಸರೋಜಮ್ಮ ಅಡುಗೆ ಮನೆಯಿಂದ ಹೊರಬಂದು 'ಹೌದು ಮಾರಾಯರೇ!' ಎಂದು ಮಾತಿಗೆ ಇಳಿದರು.

ರಾಯರಿಗೆ ಅಷ್ಟರಲ್ಲಿ ಕಳೆದ ರಾತ್ರೆಯಲ್ಲಿ ತಾನು ಸರೋಜಳಿಗೆ ಹೇಳಿದ ಮಾತುಗಳು ನೆನಪಾದುವು. ಅವರು ಸರೋಜ ನಿದ್ದೆ ಹೋಗಿಲ್ಲ ಎಂಬುದನ್ನು ಖಾತ್ರಿ ಮಾಡಿಕೊಂಡು ಬೆಡ್ ರೂಮಿಗೆ ಹೋಗಿ 'ನೋಡು ಸರೋಜ, ನನ್ನನ್ನು ಮದುವೆಯಾಗಿ ನಿನಗೆ ಒಂದು ದಿನವೂ ಸುಖವಿಲ್ಲ ಎಂದು ನೀನು ಆಗಾಗ ಆರೋಪಿಸಬಾರದು. ರಾಂಪುರದಲ್ಲಿ ನಾನು ನಿವೃತ್ತನಾದ ತಕ್ಷಣ ಎರಡು ವರುಷಕ್ಕೆ ನನ್ನನ್ನು ಅದೇ ಸಂಬಳದಲ್ಲಿ ಕಾಲೇಜು ಟ್ರಸ್ಟಿನವರು ಮುಂದುವರಿಯಿರಿ ಎಂದು ಒತ್ತಾಯಿಸಿದಾಗ 'ನೀನು ಬೇಡ' ಎಂದದ್ದು ನೆನಪಿದೆಯಾ? ಅದೇ ಹೊತ್ತಿಗೆ ಅಲ್ಲಿನ ಹನುಮಂತೇಶ್ವರ ಕಾಲೇಜಿನವರೂ ನನ್ನನ್ನು 'ಪ್ರಾಂಶುಪಾಲರಾಗಿ ಮಾಡುತ್ತೇವೆ ಬನ್ನಿ' ಎಂದು ಆಹ್ವಾನಿಸಿದಾಗ ನಿನಗೆ ನಿನ್ನ ಹಿರಿಯರ ಊರಿನ ಪ್ರೀತಿ ಹೆಚ್ಚಾಯಿತು. ಹಾಗೇ ನಿನ್ನ ಕುಟುಂಬದ ದೈವಗಳ ಮೇಲಿನ ಪ್ರೀತಿಯೂ ಮುಂದೆ ಬಂತು. ನಾವು ಊರಿಗೇ ಹೋಗೋಣ ಎಂದು ನೀನು ಒತ್ತಾಯಿಸಲು ಹತ್ತಿದಿ. ಆ ಕಾರಣದಿಂದಲೇ ನಿನ್ನ ಅಸ್ತಮಾ ಕಾಯಿಲೆಯೂ ಉಲ್ಬಣಿಸಿತು. ಇದರಿಂದಾಗಿ ನನ್ನ ಕೆರಿಯರ್ ಅಥವಾ ಸಂಪಾದನೆಯ ಬಗ್ಗೆ ಯಾಕೆ ನಾನು ಯೋಚಿಸಬೇಕು, ಅದಕ್ಕಿಂತ ನೀನು ಮತ್ತು ನಿನ್ನ ಆರೋಗ್ಯ ಮುಖ್ಯ ಎಂದು ನಿನ್ನ ಮಾತಿಗೆ ಒಪ್ಪಿ ರಾಂಪುರಕ್ಕೆ ವಿದಾಯ ಹೇಳಿದೆ. ಅದಕ್ಕೆ ಸರಿಯಾಗಿ ನಮ್ಮ ಸದಾಶಿವ ಶೆಟ್ಟರೂ ಶೆಟ್ಟೀಸ್ ಹೋಟೇಲಿನಿಂದ ನಿವೃತ್ತರಾಗಿ ಊರಿಗೆ ಹೊರಟು ನಿಂತಿದ್ದರು. ಇದರಿಂದ ಈ ಇಳಿವಯಸ್ಸಿನಲ್ಲಿ ನನಗೆ ಒಬ್ಬ ನಿಜವಾದ ಸ್ನೇಹಿತ ಸಿಕ್ಕಿದ ಹಾಗಾಯ್ತು ಎಂದು ನಿನ್ನ ಮಾತನ್ನು ಪೂರ್ಣ ಒಪ್ಪಿ ನಾನು ಈ ಸೀತಾಪುರಕ್ಕೆ ಬಂದೆ. ಇದನ್ನೆಲ್ಲ ಮರೆತ ನೀನು, 'ನಾನು ನಿನಗೆ ಅನ್ಯಾಯ ಮಾಡಿದೆ ಅಂದರೆ ಹೇಗೆ?' ಎನ್ನುತ್ತಾ ಹಾಸಿಗೆಯಲ್ಲಿ ಕುಳಿತು 'ಕೇಳಿಸಿತೇ?' ಎಂದರು.

ಸರೋಜಮ್ಮ ಉತ್ತರಿಸಿರಲಿಲ್ಲ.

'ನೋಡು ಸರೋಜ, ಇಂಥ ಮೌನ ನನಗೆ ಆಗೋದಿಲ್ಲ. ಕೇಳಿಸಿತಾ ಅಂದರೆ ಕೇಳಿಸಿತು ಅಂತ ಹೇಳು. ಇಲ್ಲಾ ಅಂದರೆ ಇಲ್ಲಾ ಅಂತ ಹೇಳು!'

ರಾಯರ ಮಾತಿಗೆ ದಢಕ್ಕನೆ ಎದ್ದು ಕುಳಿತ ಸರೋಜಮ್ಮ 'ಕೇಳಿಸಿತು ಕೇಳಿಸಿತು ಮಾರಾಯರೇ' ಎಂದು ತುಸು ದೊಡ್ಡದಾಗಿಯೇ ಚೀರುತ್ತಾ ಸಣ್ಣಗೆ ಅಳಹತ್ತಿದರು. ರಾಯರಿಗೆ ಆತಂಕವಾಯಿತು. 'ನಿನ್ನಲ್ಲಿ ಹೇಗೆ ಮಾತನಾಡುವುದು ಎಂದು ಇನ್ನೂ ನನಗೆ ಅರ್ಥ ಆಗಿಲ್ಲ' ಎಂದು ಸರೋಜಮ್ಮನನ್ನು ಎದೆಗಾನಿಸಿಕೊಂಡು ಆಕೆಯ ತಲೆ ನೀವಿದರು.

ಸರೋಜಮ್ಮ ಸಣ್ಣಗೆ ಅಳುವುದನ್ನು ಬಿಟ್ಟು ಬಿಕ್ಕಿ ಬಿಕ್ಕಿ ಅಳುವ ಹಂತಕ್ಕೆ ಹೋದರು. 'ನನ್ನ ಪ್ರೀತಿ ನಿಮಗೆ ಅರ್ಥ ಆಗುವುದಿಲ್ಲ ಇವರೇ. ನನ್ನ ಕಣ್ಣೆದುರಿನಲ್ಲಿ ನಿಮಗೆ ಏನಾದರೂ ಆದರೆ ನಾನು ಹೇಗೆ ತಡೆದುಕೊಳ್ಳಲಿ ಹೇಳಿ?' ಎಂದರು.

'ಏನೂ ಆಗುವುದಿಲ್ಲ ಸರೋಜ! ಆ ದೇವರಿದ್ದಾನೆ. ಧೈರ್ಯದಿಂದಿರು!' ಎಂದು ರಾಯರು ಹೇಳುತ್ತಿದ್ದಂತೆ ಅಳುವುದನ್ನು ನಿಲ್ಲಿಸಿದ ಸರೋಜಮ್ಮ 'ಹೌದೇ ನೀವು ದೇವರಿದ್ದಾನೆ ಎಂದು ನಂಬಿದರೆ, ಖಂಡಿತ ನಮಗೇನೂ ಆಗುವುದಿಲ್ಲ!' ಎಂದರು.

ರಾಯರಿಗೆ ನಗು ಬಂತು. 'ನಾನು ನಿನಗಾಗಿ ದೇವರು ಇದ್ದಾನೆ ಎಂದು ನಂಬುತ್ತೇನೆ. ನೀನು ಹೇಳಿದ್ದನ್ನೆಲ್ಲ ಮಾಡುತ್ತೇನೆ. ಊರು ಬೇಕಾದರೂ ಬಿಟ್ಟು ಹೋಗೋಣ ಅಂದರೆ ಹೋಗೋಣ ಎನ್ನುತ್ತೇನೆ. ಆದರೆ ಈ ಘಟನೆಯ ಹಿಂದೆ ಯಾರ್‍ಯಾರು ಇದ್ದಾರೆ ಎನ್ನುವುದೆಲ್ಲ ನನಗೆ ಗೊತ್ತಾಗಬೇಕು. ಅಷ್ಟು ಗೊತ್ತಾದರೆ ಸಾಕು. ನಾನು ಊರು ಬಿಡುವವನೇ' ಎಂದರು ದೃಢ ನಿರ್ಧಾರದಲ್ಲಿ.

ಸರೋಜಮ್ಮನಿಗೆ ನೆಮ್ಮದಿಯಾಯಿತು. ಆಕೆ 'ಬನ್ನಿ ಮಲಗೋಣ' ಎಂದು ರಾಯರನ್ನು ಹಾಸಿಗೆಗೆ ಮೆತ್ತಗೆ ಕೈ ಹಿಡಿದು ಎಳೆದರು. ರಾಯರು ನಿಧಾನವಾಗಿ ಹಾಸಿಗೆಯಲ್ಲಿ ಮಲಗುತ್ತಿದ್ದ ಹಾಗೆ ಎರಡೂ ತೋಳುಗಳಲ್ಲಿ ಗಟ್ಟಿಯಾಗಿ ರಾಯರನ್ನು ಅಪ್ಪಿಕೊಂಡ ಸರೋಜಮ್ಮ 'ಎಷ್ಟು ದಿನ ಆಯ್ತು